ವಾಲ್ಮೀಕಿ ಮಹರ್ಷಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ

5096 (5935); ಶ್ರೀ ದೆವೇಗೌಡ ಜಿ.ಟಿ. (ಚಾಮುಂಡೇಶ್ವರಿ)

ಅ) ಕಳೆದ ಮೂರು ವರ್ಷಗಳಿಂದ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಹಾಗೂ ಇತರೆ ಮೂಲಗಳಿಂದ ಬಿಡುಗಡೆಯಾದ ಅನುದಾನವೆಷ್ಟು; ಇದರಲ್ಲಿ ಖರ್ಚಾದ ಹಾಗೂ ಬಾಕಿ ಉಳಿದಿರುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು);

ಆ) ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಬ್ಯಾಂಕುಗಳಲ್ಲಿ ನಿಶ್ಚಿತ ಠೇವಣಿ ಹೂಡುವುದಕ್ಕೆ ಅನುಸರಿಸುತ್ತಿರುವ ಮಾನದಂಡಗಳೇನು;

ಇ) ಠೇವಣಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹೂಡದೆ ಖಾಸಗಿ ಬ್ಯಾಂಕುಗಳಲ್ಲಿ ಹೂಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ವಿವಿಧ ಮೂಲಗಳಿಂದ ಬಿಡುಗಡೆಯಾದ, ಖರ್ಚಾದ ಮತ್ತು ಬಾಕಿ ಉಳಿದಿರುವ ಅನುದಾನದ ವಿವರಗಳನ್ನು ಅನುಬಂಧ–01ರಲ್ಲಿ ನೀಡಲಾಗಿದೆ.

ಆ) ನಿಗಮಕ್ಕೆ ಬಿಡುಗಡೆಯಾಗಿ ವಿನಿಯೋಗಕ್ಕೆ ಬಾಕಿ ಇರುವ ಅನುದಾನವನ್ನು ಬ್ಯಾಂಕುಗಳಲ್ಲಿ ನಿಶ್ಚಿತ ಠೇವಣಿ ಹೂಡುವ ಕುರಿತಂತೆ ಸಾರ್ವಜನಿಕ ಉದ್ದಿಮೆ ಇಲಾಖೆಯಿಂದ ಹೊರಡಿಸಿರುವ ಸುತ್ತೋಲೆ

ಸಂಖ್ಯೆ ಡಿ.ಪಿ.ಇ. 30 ಎ.ಆರ್.ಯು. 2010, ದಿನಾಂಕ:19.06.2012ರಲ್ಲಿ ನೀಡಿರುವ ಮಾರ್ಗಸೂಚಿಗಳ ಅನುಸಾರ ನಿಶ್ಚಿತ ಠೇವಣಿಗಳನ್ನು Scheduled Commercial Banks (Includes both Public sector and Private sector banks) ಹೂಡಲಾಗಿರುತ್ತದೆ. ಮಾರ್ಗಸೂಚಿಯ ಪ್ರಕಾರ ಹಣಕಾಸು ಸಮಿತಿಯನ್ನು ರಚಿಸಿ, ಸಮಿತಿಯ ಅನುಮೋದನೆಯಂತೆ ಠೇವಣಿ ಮಾಡಲಾಗುತ್ತಿದೆ.

ಇ) ಬಂದಿದೆ.

ಈ) ತಕ್ಷಣವೇ ಉಪಯೋಗಿಸಲು ಸಾಧ್ಯವಾಗದ ಉಳಿದಿರುವ ಹಣವನ್ನು ಹೆಚ್ಚಿನ ದರದಲ್ಲಿ ಬಡ್ಡಿ ನೀಡುವ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ/ಅಂಗೀಕೃತ ಗ್ರಾಮೀಣ ಬ್ಯಾಂಕುಗಳಲ್ಲಿ ಮಾತ್ರ ಠೇವಣಿ ಇಡಲು ಈಗಾಗಲೇ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಮತ್ತು ಖಾಸಗಿ ಬ್ಯಾಂಕುಗಳಲ್ಲಿ ಯಾವುದೇ ಹಣ ಇಟ್ಟಿದ್ದಲ್ಲಿ ಅದನ್ನು ಸಹ ಹಿಂಪಡೆದು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇಡಲು ಸೂಚಿಸಿದೆ.

ಕರ್ನಾಟಕ ಮಹಿಳಾ ಪಾಲ್ಗೀಕ ಪರಿಶಿಷ್ಟ ಜಾಗಡಗಳ ಅಭಿವೃದ್ಧಿ ನಿಗಮ ನಿಯಮಿತ

ಶ್ರೀ ದೇವೆಗೌಡ ಪಿ ಟಿ (ಬಾಮುಂಡೇಶ್ವರಿ) ಮಾನ್ಯ ಎಫ್ಸಾನ ಸಚಿವರು ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1933 ಕ್ಕೆ ಉತ್ತರಗಳು

(ರೂ ಲಕ್ಷಗಳಲ್ಲಿ)

2012-13ನೇ ಸಾಲಿನಲ್ಲಿ ನಿಗಮಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಹಾಗೂ ಇತರೆ ಮೂಲಗಳಿಂದ ಬಂದ ಅನುದಾನ ವಿವರ

ಯೋಜನೆ	ಬಿಡುಗಡೆಯಾದ ಅನುದಾನ				ವಿಚ್ಛಾದ ಅನುದಾನ	ಬಾಕಿ ಉಳಿದಿರುವ ಅನುದಾನ
	ರಾಜ್ಯ ಸರ್ಕಾರ	ಕೇಂದ್ರ ಸರ್ಕಾರ	ಇತರೆ (NSTFDC)	ಒಟ್ಟು		
ಸ್ವಯಂ ಉದ್ಯೋಗ ಯೋಜನೆ	1600 00	1000.00	0 00	2600 00	1853 65	746 35
ಗಂಗಾ ಕಲ್ಯಾಣ ಯೋಜನೆ	7000.00	0 00	1500 00	8500 00	8263.39	236 61
ಮೈಕ್ರೋ ಕ್ರೆಡಿಟ್ ಯೋಜನೆ	1200 00	350.25	0.00	1550 25	1136.50	413 75
ಭೂ ಒಡೆತನ ಯೋಜನೆ	500 00	0.00	1250 00	1750 00	487.48	1262.52
ಸೇರು ಬಂಡವಾಳ	200 00	350.00	0 00	550 00	154.06	395 94
ಒಟ್ಟು	10500.00	1700.25	2750.00	14950.25	11895.08	3055.17

2013-14ನೇ ಸಾಲಿನಲ್ಲಿ ನಿಗಮಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಹಾಗೂ ಇತರೆ ಮೂಲಗಳಿಂದ ಬಂದ ಅನುದಾನ ವಿವರ

ಯೋಜನೆ	ಬಿಡುಗಡೆಯಾದ ಅನುದಾನ				ವಿಚ್ಛಾದ ಅನುದಾನ	ಬಾಕಿ ಉಳಿದಿರುವ ಅನುದಾನ
	ರಾಜ್ಯ ಸರ್ಕಾರ	ಕೇಂದ್ರ ಸರ್ಕಾರ	ಇತರೆ (NSTFDC)	ಒಟ್ಟು		
ಸ್ವಯಂ ಉದ್ಯೋಗ ಯೋಜನೆ	456 00	1000 00	0.00	1456 00	1456.00	0 00
ಗಂಗಾ ಕಲ್ಯಾಣ ಯೋಜನೆ	6820.00	0 00	1500 00	8320 00	4889.42	3430.58
ಮೈಕ್ರೋ ಕ್ರೆಡಿಟ್ ಯೋಜನೆ	200.00	0 00	0.00	200 00	200.00	0 00
ಭೂ ಒಡೆತನ ಯೋಜನೆ	0 00	0 00	1000.00	1000 00	1000.00	0.00
ಸೇರು ಬಂಡವಾಳ	200.00	800.00	0.00	1000 00	3.30	996.70
ಒಟ್ಟು	7676.00	1800.00	2500.00	11976.00	7548.72	4427.28

2014-15ನೇ ಸಾಲಿನಲ್ಲಿ ನಿಗಮಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಹಾಗೂ ಇತರೆ ಮೂಲಗಳಿಂದ ಬಂದ ಅನುದಾನ ವಿವರ

ಯೋಜನೆ	ಬಿಡುಗಡೆಯಾದ ಅನುದಾನ				ವಿಚ್ಛಾದ ಅನುದಾನ	ಬಾಕಿ ಉಳಿದಿರುವ ಅನುದಾನ
	ರಾಜ್ಯ ಸರ್ಕಾರ	ಕೇಂದ್ರ ಸರ್ಕಾರ	ಇತರೆ (NSTFDC)	ಒಟ್ಟು		
ಸ್ವಯಂ ಉದ್ಯೋಗ ಯೋಜನೆ	600 00	750.00	0 00	1350.00	1350	0 00
ಗಂಗಾ ಕಲ್ಯಾಣ ಯೋಜನೆ	10000 00	0 00	1500 00	11500 00	4563.22	6936.78
ಮೈಕ್ರೋ ಕ್ರೆಡಿಟ್ ಯೋಜನೆ	600 00	0 00	0 00	600.00	600	0 00
ಭೂ ಒಡೆತನ ಯೋಜನೆ	0.00	0 00	1000.00	1000.00	492.55	507.45
ಸೇರು ಬಂಡವಾಳ	200.00	0.00	0.00	200 00	200	0.00
ಸಾಲ ಮನ್ನಾ	2034.00	0 00	0.00	2034 00	0.00	2034 00
ಒಟ್ಟು	13434 00	750 00	2500 00	16684.00	7205.77	9478.23

ಟಿಪ್ಪಣಿ: ಆಯಾ ವರ್ಷದ ಬಾಕಿ ಉಳಿದಿರುವ ಅನುದಾನವು ವ್ಯವಹಾರವಾಗದೆ ಮುಂದಿನ ವರ್ಷಗಳಲ್ಲಿ ಆ ಹಣವು ಸೇರಿ ವಿಚ್ಛಾರಗುತ್ತದೆ